॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

## ದಾಸರೆಂದರೆ ಪುರಂದರದಾಸರಯ್ಯ

ರಾಗ – ಕಾಂಬೋದಿ

ದಾಸರೆಂದರೆ ಪುರಂದರದಾಸರಯ್ಯ ॥ ಪ ॥
ವಾಸುದೇವಕೃಷ್ಣನ್ನ ಸೂಸಿ ಪೂಜಿಸುವಂಥ ॥ ಅ ॥ ಪ ॥
ಗ್ರಾಸಕಿಲ್ಲದೆಪೋಗಿ ಪರರಮನೆಗಳ ಪೊಕ್ಕು ।
ದಾಸನೆಂದು ತುಳಸಿ ಮಾಲೆ ಧರಿಸಿ ॥
ಬೇಸರಿಲ್ಲದೆ ಅವರ ಕಾಡಿಬೇಡಿ ಬಳಲಿಸುತ ।
ಕಾಸು ಗಳಿಸುವ ಪುರುಷ ಹರಿದಾಸನೇ ॥ ೧ ॥
ಡಂಭಕದಿ ಹರಿಸ್ಮರಿಣೆಮಾಡಿ ಜನರಮುಂದೆ ।
ಸಂಭ್ರಮದಿ ತಾನುಂಬ ಊಟ ಬಯಸಿ ॥
ಅಂಬುಜೋದ್ಭವ ಪಿತನ ಆಗಮಗಳರಿಯದೆ ।
ತಂಬೂರಿ ಮೀಟಲವ ಹರಿದಾಸನೇ ॥ ೨ ॥
ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ ।
ಪ್ರೀಯದಲಿ ತಾನೊಂದು ಕೊಡದ ಲೋಭಿ ॥
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು ।
ಗಾಯನವ ಮಾಡಲವ ಹರಿದಾಸನೇ ॥ ೩ ॥
ಪಾಠಕನ ತೆರನಂತೆ ಪದಗಳನು ಪೇಳುತ್ತ ।
ಕೂಟ ಜನರ ಮನವ ತೋಷಗೊಳಿಸಿ ॥
ಗೂಟನಾಮಗಳ್ಹಚ್ಚಿ ಕೊಂಡ್ಹಿರಿಯತಾನೆನಿಸಿ ।
ತೂಟಕವ ಮಾಡಲವ ಹರಿದಾಸನೇ ॥ ೪ ॥
ನೀತಿಯಲ್ಲವನರಿತು ನಿಗಮ ವೇದ್ಯನ ನಿತ್ಯ ।
ವಾತಸುತನಲ್ಲಿಹನ ವರ್ಣಿಸುತಲಿ ॥
ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ।
ಪೂತಾತ್ಮ ಪುರಂದರದಾಸರಿವರಯ್ಯಾ ॥ ೫ ॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

|| ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾಯನಮಃ ||

ರಾಗ ಪಂತುವ ರಾಳಿ ತಾಳ : ಏಕ ತಾಳ

ಬೇಸರದೆ ಭಜಿಸಿರೋ ಪುರಂದರದಾಸರಾಯರ || ಪ ||
ಶ್ರೀಶನಿಮ್ಮನು ದಾಸೀನ ಮಾಡದೆ ಪೋಷಿಸುವ ಸಂತೋಷದಿಂದಲಿ ||ಅ ||
ಪುರಂದರ ಗಡದೊಳಗೆ ಹಿರಿಯ ಸಾಹುಕಾರ ನೆನಿಸಿ
ಪರಿಪರಿಯ ಸೌಖ್ಯಗಳಸುರಿಸುತ್ತ ಇರುತಿರಲು ।
ನರಹರಿ ಕರುಣದಿಂದಲಿ ಬ್ರಾಂಹಣನಾಗುತ್ತಾ ಯಾಚಕನ ತೆರದಲಿ ।
ಹರುಷದಿಂದಲಿ ಮನೆಗೆ ಹೋಗುತ್ತಾ ಯಜಮಾನ ಕಂಡು
ಜರಿದು ಬ್ರಾಂಹಣ ನ್ಹೊರಗೆ ನೂಕಲು
ಮರುದಿವಸ ಮತ್ಹೋಗಿನಿಂತಾ || ೧ ||
ಆರುತಿಂಗಳು ಬೆನ್ನ ಬೀಳುತ್ತಾ ನಾಯಕನ ಕಾಣುತ ।
ಆರು ಬಿಡುತಾರೆಂದು ಬೈಯುತ್ತಾ।
ಬೇಸತ್ತು ಎರಡು ಹೇರು ರೊಕ್ಕವ ಮುಂದೆ ಸುರಿಯುತ್ತಾ।
ಇದರೊಳಗೆ, ದುಡ್ಡೊಂದಾರಿಸಿಕೊಳ್ಳೆಂದು ಪೇಳಲು
ನಾರಾಯಣ ಬಿಟ್ಹೋದ ನಗುತ್ತಾ || ೨ ||
ಹಿತ್ತಲ ಬಾಗಿಲಲಿ ಹೋಗಿ ಮತ್ತೆ ಆತನ ಮಡದಿಯ ।
ಬೆನ್‌ಹತ್ತಿ ಬಿದ್ದನು ವಿತ್ತ ತಾರೆನುತಾ, ಮಗನ ಮುಂಜ್ಯೆಂದತ್ಸಧಿಕದಿಂ ।
ಬಾಯತೆರೆಯುತ್ತಾ ಆ ಪ್ರಾಣಿ ನುಡಿದಳು ।
ಎತ್ತಣ ದ್ರವ್ಯವು ತನಗೆನುತಾ, ನಿನ್ನ ಮೂಗಿನ ಮುತ್ತಿನ ಮೂಗುತಿಯ
ಕೊಡು ಎನೆ ಉತ್ತಮಳು ತೆಗೆದಿತ್ತಳುತ್ವರಿತಾ || ೩ ||
ಜೋಕೆಯಿಂದಲಿ, ಮೂಗುತಿ ವೊಯಿದು ।
ಆಕೆಯ ಗಂಡನ ಕಣ್ಣೆದುರಿಗೆ ಹಾಕಿದನು ತಾ, ಪಾಕಿಕೊಡು ಎನುತಾ।

ಅದ ಕಂಡು, ಇದು ನಮ್ಮಾಕೆಯದು  ಎಂದು ನುಡಿಯುತ್ತಾ।
ಅನ್ಯರದು ಇಂಥಾದ್ಯಾಕೆ ಇರಬಾರದೂ ಎನುತಾ।
ಬೆಲೆ ಹೇಳು ಎನಲು, ಬಾರಿ ಬಾರಿ ಸಾಹುಕಾರನ ಮೋರೆಹತ್ತಿ
ಮೇರೆಯಿಲ್ಲದೆ ನಾಲ್ಕು ಶುಭ್ರಕೊಡು,
ಎಂದ್ಹಾಕಿ ಪೋದನು ತಿರುಗಿಬಾರದೆ || ೪ ||
ತಿರುಗಿ ಬ್ರಾಂಹಣ ಬಾರದಿರಲು, ಕರದು ತನ್ನ ಹೆಂಡತಿಯ,
ಬರಿಯ ನಾಸಿಕವನ್ನೆಕಂಡನು ಮೂಗುತಿಯು ಎಲ್ಲೆನೆ,
ಮುರಿದಿಹುದು, ಎಂದಾಕೆ ಪೇಳಿದಳು, ವಳಗ್ಹೋಗಿ ತರದಿರೆ,
ಅರೆವೆ ನಿನ್ನ ಜೀವವೆಂದನು, ವಿಷಗೊಂಬೆನೆಂದು,
ಕರದಿ ಬಟ್ಟಲ ಧರಿಸಲಾಕ್ಷಣ, ತ್ವರಿತ, ನರಹರಿ ಅದರೊಳ್ಹಾಕಿದ || ೫ ||
ಹರುಷದಿಂದಾಭರಣ ತಂದೂ, ಪುರುಷನ ಕೈಯೊಳಗಿಡಲು,
ತರಿಸಿ ತನ್ನಲ್ಲಿದ್ದ ಪೆಟ್ಟಗೆಯಾ, ಅದು ಕಾಣದಿರಲು,
ಬೆರಗಾಗಿ ನೋಡಿದ ತನ್ನ ಮಡದಿಯಾ ||
ನಿಜಪೇಳು ಎನಲು, ಆರಿಸಿ ಪೇಳ್ದಳು ಕೊಟ್ಟಸುದ್ದಿಯಾ।
ಅಭಿಮಾನ ಕಂಜಿ, ಅರೆದು ವಿಷವನು, ಕುಡಿಯಪೋಗೆ।
ಸಿರಿರಮಣ ತಾ ಕೊಟ್ಟ ಬರೆಯಾ || ೬ ||
ದೇವ ದೇವ ಎನ್ನ ಮನದ ಭಾವವನ್ನು ತಿಳಿವುದಕ್ಕೆ ತಾ।
ವೃದ್ಧ ಬ್ರಾಂಹಣನಾಗಿ ಬಂದಿದ್ದಾ।
ಪರಿಪಕ್ವ ಎನಗಿನ್ ಆವ ಕಾಲಕ್ಕಾಗಬೇಕೆಂದಾ।
ವೈರಾಗ್ಯ ಭಾವದಿ ಜೀವಿಸಿಕೊಂಡಿರುವುದೇ ಚಂದಾ।
ಹೀಗೆಂದು ಮನೆ ಧನ ಕೋವಿದರ ಕರದಿತ್ತು ಹರುಷದಿ।
ಕಾವನೈಯ್ಯನ ದಾಸನಾದಾ || ೭ ||
ಲಕ್ಷ್ಮಿಪತಿಯ ಪಾದದಲ್ಲಿ। ಲಕ್ಷ್ಯವಿಟ್ಟು ವ್ಯಾಸರಾಯರ।
ಶಿಕ್ಷೆಯಿಂದಂಕಿತವಗೊಳ್ಳುತ್ತಾ।

ಪದಕೊರತೆ ಐದು ಲಕ್ಷಪದ ಸುಳಾದಿ ಪೇಳುತ್ತಾ।
ಪ್ರತಿ ದಿವಸದಲ್ಲಿ, ಪಕ್ಷಿವಾಹನ ನಾಟ್ಯ ವಾಡುತ್ತಾ।
ಅಪರೋಕ್ಷಪುಟ್ಟಲು । ಮೋಕ್ಷ ಸ್ಥಾನಕೆ ಕರದ್ಯೊಯ್ದು।
ಅದೋಕ್ಷಜನು । ಸಂರಕ್ಷಿಸಿದಾ ॥ ೮ ॥
ಘೋರ ನರಕದಲ್ಲಿ ಬಿದ್ದಪಾರಜನರು ।
ಚೀರುತ್ತಿರಲುದ್ಧಾರ ಮಾಡಿದ , ನಾರದರಿವರು ।
ಆವತಾರ ಮಾಡಿದ ಧಾರುಣಿಯೋಳ್ ಮತ್ತೆ ಬಂದಾರು ।
ಸರ್ವೋತ್ತಮನು ನಾರಾಯಣನೆಂದು ಸಾರಿದರು ।
ಹೀಗೆಂದು ತಿಳಿಯಲು ಮಾರಜನಕ ವಿಜಯ ವಿಠಲ ।
ಆರಿಗಾದರು ವಲಿವ ಕಾಣಿರೋ
ಬೇಸರದೆ ಭಜಿಸಿರೋ ಪುರಂದರದಾಸರಾಯರ ॥ ೯ ॥

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

*ಶ್ರೀ ಆನಂದತೀರ್ಥರು(ಶ್ರೀ ಮಧ್ವಾಚಾರ್ಯರು)*

*ಪ್ರಥಮೋಹನೂಮನ್ನಾಮೋ ದ್ವಿತಿಯೋ ಭೀಮಯೇವಚ ।*

*ಪೂರ್ಣಪ್ರಜ್ಞ ತೃತೀಯಸ್ತು ಭಗವತ್ಕಾರ್ಯ ಸಾಧಕಃ ॥*

ಇದಿರ್ಯಾರೋ ಗುರುವೆ ಸಮರ್ಯಾರೋ

*ರಾಗ – ಕಲ್ಯಾಣಿ*

ಇದಿರ್ಯಾರೋ ಗುರುವೆ ಸಮರ್ಯಾರೋ ॥ ಪ ॥
ಮದನಜನಕಪ್ರಿಯ ಗುರುಮಧ್ವರಾಯ ॥ ಅ । ಪ ॥
ಸನ್ನುತಮಹಿಮ ಪ್ರಸನ್ನವದನ ।
ನಿನಗನ್ಯನಲ್ಲವೊ ನೀ ಎನ್ನ ರಕ್ಷಿಸಬೇಕು ॥
ನಿನ್ನ ನೋಡಿದವರು ಧನ್ಯರಾಗುವರು ।
ಎನ್ನದಯಾಮೂರ್ತಿ ಮನ್ನಿಸಿನೋಡೋ ॥ ೧ ॥
ದುರ್ಜನರನು ಗರ್ಜನದಿಂದೋಡಿಸಿ ।
ಸಜ್ಜನರನು ಸಂರಕ್ಷಿಸಿದಾತನೆ ॥
ಈ ಜಗದಲಿ ಮಧ್ಯಗೇಹರ ಪತ್ನಿಯ ।
ಪೂಜ್ಯ ಜಠರದಲಿ ಜನಿಸಿದ ಧೀರ ॥ ೨ ॥
ವೇದಶಾಸ್ತ್ರಗಳಿಂದ ಮಾಯ್ಗಳ ಖಂಡ್ರಿಸಿ ।
ಸಾಧಿಸಿ ಹರಿಯೇ ಸರ್ವೋತ್ತಮನೆಂತೆಂದು ॥
ಮೋದಭರಿತವಾದ ದಿವ್ಯಶಾಸ್ತ್ರವ ಮಾಡ್ದ ।
ಮೋದತೀರ್ಥ ಪುರಂದರವಿಠಲನದಾಸ ॥೩॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

|| ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾಯನಮಃ ||

ರಾಗ - ಬಿಲಹರಿ　　　　　　　　　ತಾಳ -- ಆದಿತಾಳ

ಹೆತ್ತ ತಾಯಿ ತಂದೆಗಳ ಚಿತ್ತವ ನೋಯಿಸಿ ||
ನಿತ್ಯ ದಾನವ ಮಾಡಿ ಫಲವೇನು ||
ಸತ್ಯ ಸದಾಚಾರ ಇಲ್ಲದವನು ಜಪ |
ಹತ್ತು ಸಾವಿರ ಮಾಡಿ ಫಲವೇನು　||೧||

ತನ್ನ ಸತಿ ಸುತರು ಬಂಧುಗಳ ನೋಯಿಸಿ |
ಚಿನ್ನ ದಾನವ ಮಾಡಿದರೆ ಫಲವೇನು |
ಬಿನ್ನಣದಿಂದಲಿ ದೇಶ ದೇಶವ ತಿರುಗಿ ||
ಅನ್ನದಾನ ಮಾಡಿ ಫಲವೇನು　||೨||

ಗೌಪ್ಯ ಗುಣ ಗುಟ್ಟು ಇಲ್ಲದ ಹೆಣ್ಣಿಗೆ |
ರೂಪ ಯೌವನವಿದ್ದು ಫಲವೇನು |
ತಾಪತ್ರಯದ ಸಂಸಾರ ಕೆಡಿಸುವಂಥ|
ಪಾಪಿ ಮಗನು ಇದ್ದು ಫಲವೇನು　||೩||

ತಾಂಡವ ಧನದಿಂದ ತಂದ ಮಾತು ಕೇಳದ |
ತುಂಟು ಮಗನು ಇದ್ದು ಫಲವೇನು ||
ಭಂಡು ಮಾಡಿ ಅತ್ತಿ ಮಾವನ ಬೈವ |
ಮಂಡ ಸೊಸೆಯಿದ್ದು ಫಲವೇನು　||೪||

ಸ್ನಾನಕ್ಕೆ ಪಾನಕ್ಕೆ ತಿಳಿನೀರು |
ಕಾನನದೊಳಗಿದ್ದು ಫಲವೇನು ||
ಆನಂದಮೂರುತಿ ಪುರಂದರ ವಿಠಲನ |
ನೆನೆಯದ ತನುವಿದ್ದು ಫಲವೇನು　||೫||

**||ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ||**

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

## ಗುರುರಾಯರ ನಂಬಿರೊ ಮಾರುತಿಯೆಂಬೊ

*ರಾಗ – ಕಾಂಬೋಧಿ*

ಗುರುರಾಯರ ನಂಬಿರೊ ಮಾರುತಿಯೆಂಬೊ ।
ಗುರುರಾಯರ ನಂಬಿರೋ ॥ ಪ ॥
ಗುರುರಾಯರನಂಬಿ ಬಿಡದೆಯಾವಾಗಲೂ ।
ದುರಿತವಕಳೆದು ಸದ್ಗತಿಯ ಪಡೆವರೆಲ್ಲ॥ ಅ । ಪ ॥
ವನಧಿಯಮನೋವೇಗದಿ ಲಂಘಿಸಿ ಮಹಿತನುಜೆ ಶೋಕವತರಿದು ॥
ವನವಬೇರೊಡನೆ ಕಿತ್ತೀಡಾಡಿ ।
ಎದುರಾದ ದನುಜರಸದೆದು ಲಂಕೆಯ ತನ್ನ ಸಖಗಿತ್ತ ॥ ೧ ॥
ಕೌರವಬಕಹಿಡಿಂಬ ಕೀಚಕರೆಂಬ । ದುರುಳಸಂತತಿನೆಗ್ಗೆತ್ತಿ ॥
ಘೋರಪಾತಕಿ ದುಶ್ಯಾಸನನರಕುತವ । ಹೀರಿಮುದದಿ ಮುರವೈರಿಯ
ಭಜಿಸಿದ ॥ ೨ ॥
ಜೀವೇಶರೊಂದೆಂಬುವ ದುರ್ವಾದಿಯ । ಅಭಾವ ಶಾಸ್ತ್ರಗಳೋಡಿಸಿ ॥
ಕೋವಿದರಿಗೆ ಸಧ್ಭಾಷ್ಯವ ತೋರಿದ । ದೇವಪುರಂದರವಿಠಲ
ಸೇವಕರಾದಿ ॥ ೨ ॥

## ಸ್ವಾಮಿ ಮುಖ್ಯಪ್ರಾಣ

ರಾಗ – ಖರಹರಪ್ರಿಯ

ಸ್ವಾಮಿ ಮುಖ್ಯಪ್ರಾಣ । ನಿನ್ನ ಮರೆವರ ಗಂಟಲ ಗಾಣ ॥ ಪ ॥
ಹಿಡಿದ್ಯೋರಾಮರ ಚರಣ ನೀ ಹೌದೌದೋ ಜಗತ್ರಾಣ ॥ ಅ ॥ ಪ ॥
ಸಂಜೀವನಿ ಪರ್ವತವ ನೀ ಅಂಜದೆ ತಂದ್ಯೋ ದೇವ ।
ಅಂಜನಸುತ ಸದಾಕಾವ ಹೃತ್ಕಂಜವಾಸ ಸರ್ವಜೀವ ॥ ೧ ॥
ಏಕಾದಶ ರುದ್ರ ನೀ ವೈದ್ಯೋ ರಾಮರ ಮುದ್ರ ।
ಸಕಲ ವಿದ್ಯಾ ಸಮುದ್ರ ನೀ ಹೌದೌದೋ ಬಲಭದ್ರ ॥ ೨ ॥
ವೈಕುಂಠದಿಂದ ಬಂದು ನೀ ಪಂಪಾಕ್ಷೇತ್ರದಿ ನಿಂದ್ಯೊ ।
ಯಂತ್ರೋದ್ಧಾರಕನೆಂದು ಸ್ವಾಮಿ
ಪುರಂದರ ವಿಠಲ ನೀ ಸಲಹೆಂದ್ಯೋ ॥ ೩ ॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

<u>ಸತ್ಯ ಜಗಕಿದು ಪಂಚಭೇದವು</u>

ಸತ್ಯ ಜಗಕಿದು ಪಂಚಭೇದವು ನಿತ್ಯ ಶ್ರೀಗೋವಿಂದನ ॥ ಪ ॥
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕನೆಂದು ಸಾರಿರೈ ॥ ಅ ॥ ಪ ॥
ಜೀವ ಈಶಗೆ ಭೇದ ಸರ್ವತ್ರ ಜೀವ ಜೀವಕೆ ಭೇದವು ।
ಜೀವ ಜಡ, ಜಡ ಜಡಕೆ ಭೇದ ಜೀವ ಜಡ ಪರಮಾತ್ಮಗೆ ॥ ೧ ॥
ಮಾನುಷೋತ್ತಮರಧಿಕ ಕ್ಷಿತಿಪರು ಮನುಜ ದೇವ ಗಂಧರ್ವರು ।
ಜ್ಞಾನಪಿತ್ರಾಜಾನಕರ್ಮಜರ್ದಾನವಾರಿತತ್ವೇಶರು ॥ ೨ ॥
ಗಣಪಮಿತ್ರರು ಸಪ್ತ ಋಷಿಗಳು ವಹ್ನಿನಾರದ ವರುಣನು ।
ಇನಜಗೆ ಸಮ ಸೂರ್ಯಚಂದ್ರರು ಮನುಸುತೆಯು ಹೆಚ್ಚುಪ್ರವಹನು ॥ ೩ ॥
ದಕ್ಷ ಸಮ ಅನಿರುದ್ಧ ಗುರು ಶಚಿ ರತಿ ಸ್ವಾಯಂಭುವರಾರ್ವರು ।
ಕಕ್ಷ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು ॥ ೪ ॥
ದೇವೇಂದ್ರನಿಗಿಂದಧಿಕ ಮಹರುದ್ರದೇವ ಸಮಶೇಷ ಗರುಡರು ।
ಕೇವಲಧಿಕರು ಶೇಷಗರುಡಗೆ ದೇವಿ ಭಾರತಿ ಸರಸ್ವತೀ ॥ ೫ ॥
ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು ।
ವಾಯು ಬ್ರಹ್ಮಗೆ ಕೋಟಿಗುಣದಿಂದ ಅಧಿಕಶಕ್ತಳು ಶ್ರೀ ರಮಾ ॥ ೬ ॥
ಅನಂತಗುಣದಿಂ ಲಕುಮಿಗಧಿಕನು ಶ್ರೀಪುರಂದರವಿಠಲನು ।
ಘನಸಮರು ಇವಗಿಲ್ಲ ಜಗದೊಳು ಹನುಮ ಹೃತ್ಪದ್ಮವಾಸಿಗೆ ॥ ೭ ॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ರಾಗ -ಮುಖಾರಿ ತಾಳ--ಝಂಪತಾಳ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ ।
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆಮನವೆ ॥ಪಲ್ಲ॥
ದಿನರಾತ್ರಿಯನ್ನದೆ ವಿಷಯಲಂಪಟನಾಗಿ ।
ಸವಿಯೂಟಗಳನುಂಡು ಭ್ರಮಿಸಬೇಡ ॥
ಅವನಕೊಂದಿವನ ಕೊಂದವನಿಯಂ ಗಳಿಸುವರೆ ।
ಜವನ ದೂತರು ಬರುವ ಹೊತ್ತು ನೀನರಿಯೇ ॥೧॥
ಮೊನ್ನೆ ಮದುವೆಯಾದೆ ಕರಿವುದೊಂದೆರಡೆಮ್ಮ ।
ನಿನ್ನ ಕೊಂಡೆನು ----ಫಲವುಬಹುದು ॥
ಹೊನ್ನು ಹಣವುಂಟೆನಗೆ ಸಾಯಲಾರೆನು ಎನಲು ।
ಬೆನ್ನ ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮ ॥೨॥
ಹೊಸ ಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ ।
ಬಸಿರಿ ಹೆಂಡತಿ ಮಗನ ಮದುವೆ ನಾಳೆ ॥
ಹಸನಾಗಿ ಇದೆ ಬದುಕು ಸಾಯಲಾರೆನಲು ।
ಕುಸುರಿದರೂ ಬಿಡರು ಯಮನವರು ಆಗ ॥೩॥
ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ ।
ಮತ್ತೊಬ್ಬ ಮಗನ ಉಪನಯನ ನಾಳೆ ॥
ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು ।
ಮೃರ್ತ್ಯು ಹೆಡೆ ತಲೆಯಲ್ಲಿ ನಗುತಿರ್ಪದರಿಯೆ ॥೪॥
ಅಟ್ಟಡಿಗೆಯುಣಲಿಲ್ಲ ಇಷ್ಟ ದರುಶನವಿಲ್ಲ ।
ಕೊಟ್ಟ ಸಾಲವ ಕೇಳ್ವ ಹೊತ್ತನರಿಯೆ ।
ಕಟ್ಟಿ ತುಂಬಿದ ಮೇಲೆ ಕ್ಷಣ ಮಾತ್ರ ಇರಲಿಲ್ಲ ।
ಅಷ್ಟರಲಿ **ಪುರಂದರ ವಿಠಲನ** ನೆನೆ ಮನವೆ ॥೫॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ||

## ನಿಮ್ಮ ಭಾಗ್ಯ ದೊಡ್ಡದೊ ನಮ್ಮ ಭಾಗ್ಯ ದೊಡ್ಡದೊ

ರಾಗ --ಪಂತುರಾವಳಿ ತಾಳ --ಆದಿತಾಳ

ನಿಮ್ಮ ಭಾಗ್ಯ ದೊಡ್ಡದೊ ನಮ್ಮ ಭಾಗ್ಯ ದೊಡ್ಡದೊ ||ಪಲ್ಲ||
ಸಮ್ಮತಿಂದ ನಾವು ನೀವು ಸಾಟಿ ಮಾಡಿ ನೋಡುವ ಬನ್ನಿ||ಅ .ಪ ||
ಹೇಮ ಹೊನ್ನು ಹಣಗಳಿಗೆ ಹೇರಳ ಭಯಗಳುಂಟು |
ರಾಮನಾಮದ್ರವ್ಯಕಿನ್ನು ಯಾರ ಭಯವಿಲ್ಲವಯ್ಯ ||೧||
ಕಡಗ ಕಂಠಮಾಲೆಗಳಿಗೆ ಕಳ್ಳರ ಅಂಜಿಕೆಯುಂಟು |
ಅಡವಿ ತುಳಸಿಮಾಲೆಗಿನ್ನು ಆರ ಅಂಜಿಕೆಲ್ಲ ವಯ್ಯ ||೨||
ವ್ಯಾಪಾರ ಉದ್ಯೋಗಕಿನ್ನು ವ್ಯಾಕುಲದ ಭಯವುಂಟು |
ಗೋಪಾಳದ ವೃತ್ತಿಗಿನ್ನು ಗೊಡವೆ ಯಾರದಿಲ್ಲವಯ್ಯಾ ||೩||
ಸರಕು ಬೆಲ್ಲ ತುಪ್ಪ ಧಾನ್ಯ ಸವೆದೀತೆಂಬ ಚಿಂತೆಯುಂಟು |
ಹರಿನಾಮಾಮೃತಕೆ ಇನ್ನು ಯಾವ ಚಿಂತೆಯಿಲ್ಲವಯ್ಯ ||೪||
ನಿಮ್ಮ ಭಾಗ್ಯ ಲಕ್ಷ್ಮೀದೇವಿ ನಮ್ಮ ಭಾಗ್ಯ ನಾರಾಯಣನು |
ನಮ್ಮ ನಿಮ್ಮ ಭಾಗ್ಯದೊಡೆಯ ಪುರಂದರ ವಿಠಲನು ||೫||

|| ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ||

## ಅಲ್ಲಿದೆ ನಮ್ಮನೆ ಇಲ್ಲಿ ಹೋದೆ ಸುಮ್ಮನೆ

೮. ರಾಗ -ಪೂರ್ವಿ ತಾಳ --ಅಟ್ಟತಾಳ

ಅಲ್ಲಿದೆ ನಮ್ಮನೆ ಇಲ್ಲಿ ಹೋದೆ ಸುಮ್ಮನೆ ||ಪಲ್ಲ||
ಕದ ಬಾಗಿಲಿರಿಸಿದ ಕಳ್ಳ ಮನೆ ಇದು |
ಮುದದಿಂದ ಲೋಲಾಡೊ ಸುಳ್ಳುಮನೆ
ಇದಿರಾದಿ ವೈಕುಂಠವಾಸ ಮಾಡುವಂಥ |
ಪದುಮನಾಭನ ದಿವ್ಯ ಬದುಕು ಮನೆ ||೧||
ಮಾಳಿಗೆ ಮನೆಯೆಂದು ನೆಚ್ಚಿ ಕೆಡಲುಬೇಡ |
ಕೇಳಯ್ಯ ಹರಿಕಥೆ ಶ್ರವಣಂಗಳ ||

ನಾಳೆಮದೂತರು ಬಂದೆಳೆದೊಯ್ವಾಗ ।
ಮಾಳಿಗಿ ಮನೆ ಸಂಗಡ ಬಾರದಯ್ಯ ॥೨॥
ಮಡದಿ ಮಕ್ಕಳೆಂಬೊ ಹಂಬಲ ನಿನಗೇಕೊ ।
ಕಡುಗೊಬ್ಬುತನದಲಿ ನಡೆಯದಿರು ॥
ಒಡೆಯ ಶ್ರೀಪುರಂದರ ವಿಠಲನ ಚರಣವ ।
ಧೃಢಭಕ್ತಿಯಲಿ ನೀ ಭಜಿಸಲೊ ಮನುಜ ॥೩॥

## ನಿಂದಕರಿರಬೇಕಿರಬೇಕು

ರಾಗ -ನಾದನಾಮಕ್ರಿಯೆ ತಾಳ --ಅಟ್ಟತಾಳ

ನಿಂದಕರಿರಬೇಕಿರಬೇಕು ॥ಪಲ್ಲ॥
ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೊ ಹಾಗೆ ॥ಅ.ಪ ॥
ಅಂದಂದು ಮಾಡಿದ ಪಾಪವೆಂಬ ಮಲ ।
ತಿಂದು ಹೋಗುವರಯ್ಯ ನಿಂದಕರು ॥
ವಂದಿಸಿ ಸ್ತುತಿಸುವ ಜನರೆಲ್ಲರು ನಮ್ಮ ।
ಪೊಂದಿಹ ಪುಣ್ಯವನೊಯ್ಯುವರಯ್ಯ ॥೧॥
ದುಷ್ಟ ಜನರು ಈ ಸೃಷ್ಟಿಯೊಳಿದ್ದರೆ ।
ಶಿಷ್ಟ ಜನರಿಗೆಲ್ಲ ಕೀರ್ತಿಗಳು ॥
ಇಷ್ಟಪ್ರದ ಶ್ರೀಕೃಷ್ಣ ನಿನ್ನೊಳು ।
ಇಷ್ಟೇ ವರವನ್ನು ಬೇಡುವೆನಯ್ಯ ॥೨॥
ದುರುಳ ಜನಂಗಳು ಚಿರಕಾಲ ವಿರುವಂತೆ ।
ಕರವ ಮುಗಿದು ವರ ಬೇಡುವೆನು ॥
ಪರಿಪರಿ ತಮಸಿಗೆ ಗುರಿಯಹರಲ್ಲದೆ ।
ಪರಮ ದಯಾನಿಧೆ ಪುರಂದರ ವಿಠಲ ॥೩॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

*ಶ್ರೀ ಭಾರತಿ ದೇವಿಯರು ( ೪ ನೇ ಕಕ್ಷ)*

ಭಾರತಿದೇವಿಯ ನೆನೆ ನೆನೆ

ರಾಗ – ಮೋಹನ

ಭಾರತಿದೇವಿಯ ನೆನೆ ನೆನೆ ॥ ಪ ॥
ನಿರುತ ಭಕುತಿಗಿದು ಮನೆಮನೆ ॥ ಅ ॥ ಪ ॥
ಮಾರುತನರ್ಧಾಂಗಿ ಸುರಚರಿತ ಕೋಮಲಾಂಗಿ ।
ಸಾರಸಾಕ್ಷಿ ಕೃಪಾಂಗಿ ಅಪಾಂಗಿ ॥ ೧ ॥
ಕಿಂಕಿಣಿ ಕಿಣಿ ಪಾದ ಪಂಕಜನೂಪುರ ।
ಕಂಕಣ ಕುಂಡಲಾಲಂಕೃತ ದೇಹ ॥ ೨ ॥
ಶಂಕರಸುರವಂದಿತ ಚರಣೆ ।
ಕಿಂಕರಿ ಪುರಂದರ ವಿಠಲನ ಕರುಣೆ ॥ ೩ ॥

*ಶ್ರೀ ಸರಸ್ವತಿ ದೇವಿಯರ ಸ್ತೋತ್ರ (೪ನೇ ಕಕ್ಷ)*

ಕೊಡುಬೇಗ ದಿವ್ಯಮತಿ

ರಾಗ – ಸರಸ್ವತಿ

ಕೊಡುಬೇಗ ದಿವ್ಯಮತಿ ಸರಸ್ವತಿ ॥ ಪ ॥
ಮೃಡಹರಿ ಹಯಮುಖರೊಡೆಯಳೆ ನಿನ್ನಯ ।
ಅಡಿಗಳಿಗೆರಗುವೆ ಅಮ್ಮ ಬ್ರಹ್ಮನ ರಾಣಿ ॥ ಅ ॥ ಪ ॥
ಇಂದಿರಾರಮಣನ ಹಿರಿಯ ಸೊಸೆಯೆನೀನು ।
ನಿಂದೆನ್ನ ವದನದಿ ಹರಿಯ ನಾಮವನುಡಿಸೆ ॥ ೧ ॥
ಅಖಿಳವಿದ್ಯಾಭಿಮಾನಿ ಅಜನಪಟ್ಟದ ರಾಣಿ ।
ಸುಖವಿತ್ತು ಪಾಲಿಸೆ ಸುಜನ ಶಿರೋಮಣಿ ॥ ೨ ॥
ಪತಿತಪಾವನೆ ನೀನೇ ಗತಿಯೆಂದು ನಂಬಿದೆ ।
ವಿತತ ಪುರಂದರ ವಿಠಲರಾಯನ ತೋರೇ ॥ ೩ ॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

*ಶ್ರೀ ಪರಮಾತ್ಮನ ಪರಸ್ತೋತ್ರ (೧ ನೇ ಕಕ್ಷ)*

ಗೋವಿಂದಾ ನಿನ್ನಾನಂದ ಸಾಧನ ಸಕಲವು ನಿನ್ನಾನಂದ

ಗೋವಿಂದಾ ನಿನ್ನಾನಂದ ಸಾಧನ ಸಕಲವು ನಿನ್ನಾನಂದ ॥ ಪ ॥
ಅಣುರೇಣು ತೃಣ ಕಾಷ್ಠ ಪರಿಪೂರ್ಣ ಗೋವಿಂದ ।
ನಿರ್ಮಲಾತ್ಮಕವಾಗಿ ಇರುವದೇ ಆನಂದ ॥ ೧ ॥
ಸೃಷ್ಟಿಸ್ಥಿತಿಲಯ ಕಾರಣ ಗೋವಿಂದ ।
ಈ ಪರಿ ಮಹಿಮೆಯ ತಿಳಿಯೋದೇ ಆನಂದ ॥ ೨ ॥
ಮಂಗಳ ಮಹಿಮ ಶ್ರೀ ಪುರಂದರ ವಿಠಲ ।
ಹಿಂಗದೆ ದಾಸರ ಸಲಹೋದೆ ಆನಂದ ॥ ೩ ॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

ಕಾಗದ ಬಂದಿದೆ ನಮ್ಮ ಕಮಲನಾಭನದು

ಕಾಗದ ಬಂದಿದೆ ನಮ್ಮ ಕಮಲನಾಭನದು ॥ ಪ ॥
ಈ ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೋ ॥ ಅ । ಪ ॥
ಕಾಮ ಕ್ರೋಧವ ಬಿಡಿರೆಂಬೊ ಕಾಗದ ಬಂದಿದೆ ।
ನೇಮನಿಷ್ಠೆಯೊಳಿರೆಂಬೋ ಕಾಗದ ಬಂದಿದೆ ॥
ತಾಮಸಜನರ ಕೂಡದಿರೆಂಬೋ ಕಾಗದ ಬಂದಿದೆ ।
ನಮ್ಮ ಕಾಮಜನಯ್ಯನು ತಾನೇ ಬರೆದ ಕಾಗದ ಬಂದಿದೆ ॥ ೧ ॥
ಹೆಣ್ಣಿನಾಸೆ ಬಿಡಿರೆಂಬೋ ಕಾಗದ ಬಂದಿದೆ ।
ಹೊನ್ನಿನಾಸೆ ಬಿಡಿರೆಂಬೋ ಕಾಗದ ಬಂದಿದೆ ॥
ಮಣ್ಣಿನಾಸೆ ಬಿಡಿರೆಂಬೋ ಕಾಗದ ಬಂದಿದೆ ।
ನಮ್ಮ ಕಮಲನಾಭನು ತಾನೇ ಬರೆದ ಕಾಗದ ಬಂದಿದೆ ॥ ೨ ॥
ಗೆಜ್ಜೆ ಕಾಲ್ಕಟ್ಟಿರೆಂಬೊ ಕಾಗದ ಬಂದಿದೆ ।
ಹೆಜ್ಜೆಗೆ ಹೆಜ್ಜೆಗೆ ಹರಿ ಎನ್ನಿರೆಂಬೊ ಕಾಗದ ಬಂದಿದೆ ॥
ಲಜ್ಜೆ ಬಿಟ್ಟು ಕುಣಿಯಿರೆಂಬೊ ಕಾಗದ ಬಂದಿದೆ ।
ನಮ್ಮ ಪುರಂದರ ವಿಠಲ ತಾನೇ ಬರೆದ ಕಾಗದ ಬಂದಿದೆ ॥ ೩ ॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

<u>ಅಭಿಷೇಕೆನುತಲಿ ಅಘೃತ ತಂದರೆ</u>

ಅಭಿಷೇಕೆನುತಲಿ ಅಘೃತ ತಂದರೆ ಆಚಮನವ ಮಾಡಿದಾ ।
ಮೀಸಲು ಗಂಧಾ ಅಕ್ಷತೆ ಇಟ್ಟರೆ ಶ್ರೀತುಳಸಿಯ ಮುಡಿದಾ ॥ ಪ ॥
ದೇವರ ನೈವೇದ್ಯಕೆ ಮೃಷ್ಟಾನ್ನ ತಂದರೆ । ಬಾಯ್ತೆರೆದೂ ಸವಿದಾ ।
ದೇವತಾರ್ಚನೆಯಿದು ನೋಡುಬಾಯೆಂದರೆ ಗೋವಿಂದನ ಕರೆದಾ ॥ ೧ ॥
ನೆಲುವಿನ ಮೇಲಿನ ಹಾಲು ಮೊಸರು । ಸಕ್ಕರೆಗಳಾ ಸವಿದಾ ।
ಕೃಷ್ಣಾ, ಕೃಷ್ಣಾ, ಕೃಷ್ಣಾ ಎಂದರೆ ಬಿಕ್ಕೆನೂ ಎಂದಾ ॥ ೨ ॥
ಬೆಕ್ಕಿನಂತೆ ಕೂಗುತ ಊರೊಳಗೆಲ್ಲಾ । ಹಕ್ಕಿಗಳ ಹಾರ್‍ಹೊಡೆದಾ ।
ಮಕ್ಕಳು ಮಲಗ್ಯಾವೆ ಎಬ್ಬಿಸಬೇಡೆಂದರೆ ಬಟ್ಟಲು ಬಾರಿಸಿದಾ ॥ ೩ ॥
ಸಾರಿಸಿದ ಮನೆಯೊಳು ಸುಣ್ಣವಚೆಲ್ಲಿ । ಅಟ್ಟದೊಳು ಹರವಿದನೇ ।
ಕಾರುಣ್ಯರಂಗನ ನೋಡುಬಾ ಎಂದರೆ ಗೋಪಿನ ಏನೆಂದಾ ॥ ೪ ॥
ಹೂಮಿಡಿಯಾದ ಹಾಗಲ ಬಳ್ಳಿ ಬೇರದರಸಿಲೆ ಕಿತ್ತಿದಾ ।
ದಾರಾಮ ನಮ್ಮ ದೂರು ಹೇಳ ಹೋದರೆ । ನಾವಳ್ಳೆವನೆಂದಾ ॥ ೫ ॥
ಅಟ್ಟದ ಮೇಲೆ ಹರವಿದ ಧೋತರ । ಬಟ್ಟೆನಿಂದಲೆ ಹರಿದಾ ।
ಅತ್ತೆಮಾವ ಬೈದರೆ ನನಗೆ ಹುಟ್ಟಿದ ದಿವಸೆಂದಾ ॥ ೬ ॥
ಪಟ್ಟವಾಳಿ ಸೀರೆಯೊಳು ಮೈಧೂಳ ವರೆಸಿ ಅಪ್ಪಿಕೊಂಡಳು ರಂಗನಾ ।
ದುಷ್ಟತನ ಮಾಡಬೇಡ ಪುರಂದರ ವಿಠಲನೆ ರಕ್ಷಿಸೆಂದಳು ಗೋಪಿ ॥೭॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥

॥ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

## ಕನಸ್ಸು ಕಂಡೇನೇ ಮನದಲಿ

ಕನಸ್ಸು ಕಂಡೇನೇ ಮನದಲಿ ಕಳವಳ ಗೊಂಡೇನೇ ॥ ಪ ॥
ಎನಾ ಪೇಳಲೆತಂಗೀ ತಿಮ್ಮಯ್ಯನ ಪಾದವನು ಕಂಡೇ ॥ ಅ ॥ ಪ ॥
ಪೊನ್ನಾದ ಕಡಗನಿಟ್ಟೂ ತಿಮ್ಮಯ್ಯತಾ ಪೊಲ್ಪನಾಮವನಿಟ್ಟೂ ।
ಅಂದೂಗೆ ಘಲುಕ್ಕೆನುತಾ ಎನ್ನಾ ಮುಂದೆ ಬಂದು ನಿಂತಿದ್ದನಲ್ಲೇ ॥ ೧ ॥
ಮಕರಾ ಕುಂಡಲ ನಿಟ್ಟೂ ತಿಮ್ಮಯ್ಯತಾ ಕಸ್ತೂರಿ ತಿಲಕವಿಟ್ಟೂ ।
ಗೆಜ್ಜೆ ಗಲುಕ್ಕೆನುತಾ । ಸ್ವಾಮಿತಾ ಬಂದುನಿಂತಿದ್ದನಲ್ಲೇ ॥ ೨ ॥
ಮುತ್ತಿನ ಪಲ್ಲಕ್ಕಿ ಯತಿಗಳು ಹೊತ್ತು ನಿಂತಿದ್ದರಲ್ಲೆ ।
ಛತ್ರ ಚಾಮರದಿಂದಾ ರಂಗಯ್ಯನ ಉತ್ಸವ ಮೂರುತಿಯಾ ॥ ೩ ॥
ತಾವರೆ ಕಮಲದಲ್ಲಿ ರಂಗಯ್ಯತಾ ಬಂದುನಿಂತಿದ್ದನಲ್ಲೇ ।

ವಾಯುಬೊಮ್ಮಾದಿಗಳು ರಂಗಯ್ಯನ ಸೇವೆ ಮಾಡುವರಲ್ಲೇ ॥ ೪ ॥
ನವರತ್ನ ಕೆತ್ತಿಸಿದ ಸ್ವಾಮಿಯನ್ನ ಹೃದಯ ಮಂಟಪದಲ್ಲಿ ।
ಸರ್ವಾಭರಣದಿಂದಾ ಪುರಂದರ ವಿಠಲನ ನೋಡಿದೆನೇ ॥ ೫ ॥

॥ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥